ಜಿಗಿವ, ಓಡಾಡುವ ಕೋತಿ, ಕುದುರೆ, ಗಿಳಿ, ಪಿಕಳಾರ. ಏನುಂಟು ಏನಿಲ್ಲ ಇಲ್ಲಿ ಎನ್ನಿಸಿತು. ಅದರ ಹಿಂದೆಯೇ ಯಾವ ದುಂದುಗಾರಿಕೆಯಿಂದ ಮಗುವನ್ನು ದೂರವಿಡಬೇಕು ಅಂದುಕೊಂಡಿದ್ದೆವೋ ಅದೇ ಗುಣವನ್ನು ಸಾಕ್ಷಾತ್ಕರಿಸಿಕೊಳ್ಳಲು ಬೇಕಾದ ಸಂಪನ್ಮೂಲಗಳೆಲ್ಲ ಅಲ್ಲಿದ್ದವು.

ಬಹಳ ಹೊತ್ತಿನ ತನಕ ಕುಳಿತಿದ್ದು ಇವುಗಳಲ್ಲಿ ಒಂದೆರಡನ್ನು ಮಾತ್ರ ಇಟ್ಟುಕೊಂಡು ಬ್ರಿಯಾನಾ ಲಾಗೋಸ್‌ಗೆ ತೆರಳಿದಮೇಲೆ ಉಳಿದ ಆಟಿಕೆಗಳನ್ನೆಲ್ಲ ಡೋನೇಟ್ ಮಾಡಬಹುದು ಅಂದುಕೊಂಡೆ. ನಮಗೆ ಬೇಡವಾದ ಸಾಮಗ್ರಿಗಳನ್ನು ಮನೆಯ ಮುಂದಿನ ಪೇವ್‌ಮೆಂಟಿನ ಮೇಲೆ ನೋಟ್ ಬರೆದು ಇಟ್ಟರೆ ಅವಶ್ಯಕತೆಯಿದ್ದವರು ತೆಗೆದುಕೊಂಡು ಹೋಗುತ್ತಿದ್ದರು.

ಸಂಜೆ ಖಾಲಿ ಸೂಟ್‌ಕೇಸಿನ ಜೊತೆಗೆ ಎಲ್ಲ ಆಟಿಕೆಗಳ ಅಂದಾಜು ಮೊತ್ತದ ಚೆಕ್ ಬರೆದು ಅವಳ ಮನೆಗೆ ಹೋದೆ. ಹಣ ತೆಗೆದುಕೊಳ್ಳಲು ಸುತಾರಾಂ ಇಲ್ಲ ಎಂದು ಬಿಟ್ಟಳು. "ಹಣ ಬೇಕಿದ್ದರೆ ನಿನ್ನ ಬಳಿಯೇ ಬಂದು ಕೇಳುತ್ತೇನೆ. ನಿನ್ನ ಮಗುವಿಗೆ ಪ್ಯಾಕೇಜ್ ತೆಗೆದ ಆಟಿಕೆಗಳನ್ನು ಕೊಟ್ಟೆನಲ್ಲ ಅಂತ ನನಗೂ ಬೇಜಾರಿದೆ. ಅಂಥದರಲ್ಲಿ ಅದಕ್ಕೆ ಹಣ ತೆಗೆದುಕೊಳ್ಳುತ್ತೇನಾ? ದಯವಿಟ್ಟು ಒತ್ತಾಯ ಮಾಡಬೇಡ" ಅಂದುಬಿಟ್ಟಳು.

ಮನೆ ಬಿಟ್ಟು ಹೊರಡುವ ಹಿಂದಿನ ದಿನ ಭಾರತೀಯ ಶೈಲಿಯ ಊಟ ತಯಾರಿಸಿ ಬ್ರಿಯಾನಾ, ಟೆಡಿ ಮತ್ತು ಟೇಮಿಯರನ್ನು ಊಟಕ್ಕೆ ಕರೆದಿದ್ದೆವು. ಮಕ್ಕಳಿಬ್ಬರೂ ಮಲಗಿದ ಮೇಲೆಯೂ ಅಂದು ರಾತ್ರಿ ಘಂಟೆ ಹತ್ತಾದರೂ ನಮ್ಮ ಮಾತು ಮುಗಿಯುವ ಸೂಚನೆಯೇ ಕಾಣಲಿಲ್ಲ.

★★★

ಡಗ್ಲಸ್ ಟ್ರೀ ಸರ್ವಿಸಸ್ ಎಂದು ಹಸಿರು ಬಣ್ಣದಲ್ಲಿ ಬರೆಸಿಕೊಂಡ ಬಿಳಿಯ ಮಿನಿ ಟ್ರಕ್ಕು ನಮ್ಮ ಅಂಗಳದಲ್ಲಿ ನಿಂತಾಗ ಸ್ನೋ ಬಹುತೇಕ ಕರಗಿತ್ತು. ರಸ್ತೆಯಿಂದ ಎತ್ತಿಹಾಕಿದ್ದಲ್ಲಿ ಮಾತ್ರ ಮಣ್ಣು ಗರಡಿಕೊಂಡು ಅಲ್ಲಿಲ್ಲಿ ಗುಪ್ಪೆ ಬಿದ್ದಿದ್ದ ಸ್ನೋ ಸೀಮೆಎಣ್ಣೆಯಲ್ಲದ್ದಿಟ್ಟ ಹತ್ತಿಯಂತೆ ಆಪ್ತವಾಗಿ ಕಾಣುತ್ತಿತ್ತು. ಡಗ್‌ನ ಟ್ರಕ್ಕಿನ ಹಿಂಬದಿಯ ಕಂಬಿಯ ಮೇಲೆ ಟ್ರಂಪ್‌ರನ್ನು ಬೆಂಬಲಿಸುವ 'ಮೇಕ್ ಅಮೆರಿಕಾ ಗ್ರೇಟ್ ಅಗೇನ್' ಕೆಂಪು ಧ್ವಜವನ್ನು ಕಂಡು ಒಂದು ಕ್ಷಣ ಹಿಂಜರಿದೆ.

ಕಳೆದ ವರ್ಷ ಮರವನ್ನೆತ್ತಲು ಡಗ್‌ನನ್ನು ಕರೆದಾಗ ಈ ಧ್ವಜ ಕಂಡಿದ್ದು ನೆನಪಿರಲಿಲ್ಲ. ಆದರೆ, ಆಗಿನ್ನೂ ಟ್ರಂಪ್‌ರ ಮರು ಚುನಾವಣೆಯ ಬಿಸಿ ಏರಿರಲಿಲ್ಲ ಎಂಬುದೂ ನೆನಪಾಯಿತು. ಈಗ ಚುನಾವಣೆ ಮುಗಿದು ಜೋ ಬೈಡನ್ ಬಹುಮತ ಗಳಿಸಿ, ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇನ್ನೇನು ಜನವರಿ ಇಪ್ಪತ್ತನೆಯ ತಾರೀಖು ಅವರ ಅಧ್ಯಕ್ಷತೆಯ ಅವಧಿ ಪ್ರಾರಂಭವಾಗುವುದು ನಿಗದಿಯೂ ಆಗಿತ್ತು. ಆದರೆ, ಸದರಿ ಅಧ್ಯಕ್ಷ ಟ್ರಂಪ್ ಮಾತ್ರ ಯಾವ ಆಧಾರವೂ ಇಲ್ಲದೇ, "ಈ ಚುನಾವಣೆಯಲ್ಲಿ ಅನ್ಯಾಯ ನಡೆದಿದೆ. ನನ್ನಿಂದ ಮತಗಳನ್ನು ಕದಿಯಲಾಗಿದೆ. ಸ್ಟಾಪ್ ದ ಸ್ಟೀಲ್" ಅಂತ ಬಡಬಡಿಸುತ್ತಲೇ ಇದ್ದರು. ದೇಶದಾದ್ಯಂತ ಹಂಚಿಹೋಗಿರುವ ಟ್ರಂಪ್‌ರ ಬೆಂಬಲಿಗರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಂತೆ ಅವರ ಸುಳ್ಳುಗಳಿಗೆಲ್ಲ ಜಯಕಾರ ಹಾಕುತ್ತಿದ್ದರು. ಚುನಾವಣೆ ಮುಗಿದು ತಿಂಗಳುಗಳೇ ಕಳೆದರೂ ಇನ್ನೂ ಪ್ರಚಾರದ ಧ್ವಜಗಳನ್ನು ತಮ್ಮ ಮನೆಗಳ ಮುಂದೆಯೂ, ವಾಹನಗಳಲ್ಲೂ ಎಲ್ಲರಿಗೂ ಕಾಣುವ ಹಾಗೆ ಪ್ರತಿಷ್ಠಾಪಿಸಿಕೊಂಡಿದ್ದರು. ಅಂಥದೇ ಒಂದು ಧ್ವಜ ಹೊದ್ದ ವಾಹನ ಅಂದು ನಮ್ಮ ಮನೆಯ ಮುಂದೆಯೂ ನಿಂತಿತ್ತು.

ಅದೇಕೋ ಶಬ್ದಕ್ಕೆ ನಿಲುಕದಷ್ಟು ಆಳದಲ್ಲಿ ಅಳುಕುಂಟಾಯಿತು. ಡಗ್ ಕಳೆದೆರಡು ವರ್ಷಗಳಿಂದ ಪರಿಚಿತ ವ್ಯಕ್ತಿಯೇ ಆಗಿದ್ದರೂ ಆತನ ಟ್ರಂಪ್ ಧ್ವಜ ನೋಡಿದ ಮೇಲೆ ಸಂವಹನದಲ್ಲಿ ಸರಳತೆಯನ್ನು ಉಳಿಸಿಕೊಳ್ಳಲು ನಾನು ಹೆಣಗಬೇಕಾಯಿತು. ಆದಷ್ಟು ಸಹಜ ಮುಖಚರ್ಯೆಯ ಧರಿಸಿ ಹಲೋ ಹೇಳಿದೆ. ಅವನು ತನ್ನ ಎಂದಿನ ಶೈಲಿಯಲ್ಲಿ, "ವಾಟ್ ಅನದರ್ ಟ್ರೀ ಡೌನ್ ನೌ ಮಿಸ್? ಪೂವರ್